**ಕರ್ನಾಟಕ ಸರ್ಕಾರ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001**
**ದೂರವಾಣಿ ಸಂಖ್ಯೆ:080-22384574,E-mail:prspr.karnataka@ gmail.com**

**ಸಂಖ್ಯೆ**: ಗ್ರಾಅಪ:233:ಗ್ರಾಪಂಅ:2021 ದಿನಾಂಕ:24-06-2021

# ಪ್ರಕಟಣೆ

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಪಂಚಾಯತ್ ರಾಜ್ ಸಂಸ್ಥೆಗಳ ಸಾರ್ವಜನಿಕ ಕುಂದು ಕೊರತೆ ನಿವಾರಣಾ ಪ್ರಾಧಿಕಾರದಲ್ಲಿ ಸ್ವೀಕೃತವಾಗುವ ದೂರುಗಳ ವಿಲೇವಾರಿ ಮತ್ತು ಕುಂದುಕೊರತೆ ನಿವಾರಣೆಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 296-ಎರ ಉಪಬಂಧದನ್ವಯ ಕೆಳಕಂಡ ಜಿಲ್ಲೆಗಳಿಗೆ ಸಾರ್ವಜನಿಕ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಗಳ ಹುದ್ದೆಗಳನ್ನು ಆಯ್ಕೆ ಮೂಲಕ ನೇಮಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಬೆಂಗಳೂರು ನಗರ, ಕಲಬುರಗಿ, ಬೆಳಗಾವಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳು.**

**ಅರ್ಹತೆಗಳು:**

1. ನೇಮಕಾತಿಯು ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ನಿವೃತ್ತ ವಿಶೇಷ ಡೆಪ್ಯೂಟಿ ಕಮೀಷನರ್ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿ.
2. **ಹುದ್ದೆಯ ಅವಧಿ**:-ಹುದ್ದೆಯನ್ನು ವಹಿಸಿಕೊಂಡ ದಿನಾಂಕದಿಂದ 5 ವರ್ಷಗಳ ಅವಧಿಗೆ ಅಥವಾ ಅವರಿಗೆ 65 ವರ್ಷಗಳಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹುದ್ದೆಯನ್ನು ಧಾರಣ ಮಾಡಬಹುದಾಗಿದೆ. ಮರು ನೇಮಕಾತಿಗೆ ಅರ್ಹರಾಗಿರುವುದಿಲ್ಲ. ಕರ್ತವ್ಯ ನಿರ್ವಹಣೆಯಲ್ಲಿ ವಿಳಂಬ ಮತ್ತು ನೈತಿಕ ಅಧಃಪತನವನ್ನು ಒಳಗೊಂಡಿದೆ ಎಂದು ಸರ್ಕಾರವು ಅಭಿಪ್ರಾಯಿಸಿದ್ದಲ್ಲಿ ಸರ್ಕಾರದ ಆದೇಶದ ಮೂಲಕ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿ ಹುದ್ದೆಯಿಂದ ತೆಗೆದುಹಾಕಲು ಸರ್ಕಾರ ಸಕ್ಷಮ ಪ್ರಾಧಿಕಾರವಾಗಿರುತ್ತದೆ.
3. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ನಿಯಮ 313-ಬಿ ಪ್ರಕಾರ ಮರು ನೇಮಕಾತಿ ವೇತನವನ್ನು ನಿಗದಿಗೊಳಿಸಲಾಗುವುದು.
4. ಕಾಮಗಾರಿ ತಪಾಸಣೆ, ಕ್ಷೇತ್ರ ಭೇಟಿ/ ವೀಕ್ಷಣೆ ಕೆಲಸಗಳಿಗೆ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಳ್ಳಲು ಸಮರ್ಥರಿರಬೇಕು.
5. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಗರಿಷ್ಟ ವಯಸ್ಸು 65 ವರ್ಷಗಳನ್ನು ಮೀರಿರಬಾರದು.

## ಕರ್ತವ್ಯ ಮತ್ತು ಜವಾಬ್ದಾರಿಗಳ ವಿವರ:

1. ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ಬಾಧಿತ ವ್ಯಕ್ತಿಗಳಿಂದ ದೂರುಗಳನ್ನು ಸ್ವೀಕರಿಸುವುದು ಹಾಗೂ ಅವುಗಳ ಬಗ್ಗೆ ಸೂಕ್ತ ವಿಚಾರಣೆಯನ್ನು ನಡೆಸುವುದು, ಬಾಧಿತ ವ್ಯಕ್ತಿಗಳಿಗೆ ಸೂಕ್ತ ಪರಿಹಾರವನ್ನು ಒದಗಿಸುವುದು ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಡಿ ಹಾಗೂ ಸರ್ಕಾದ ಇನ್ನಿತರೆ ನಿಯಮಗಳು, ನಿರ್ದೇಶನಗಳು, ಆದೇಶ ಮತ್ತು ಸುತ್ತೋಲೆಯನ್ವಯ ನಿರ್ವಹಿಸಬೇಕಾಗಿದ್ದ ಕರ್ತವ್ಯಗಳು ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು. ಪ್ರಾಧಿಕಾರಿಯ ಅಭಿಪ್ರಾಯದಲ್ಲಿ, ಅಧಿಕಾರಿ, ನೌಕರ ಮತ್ತು ಸಿಬ್ಬಂದಿ ವರ್ಗದವರು ಹಾಗೂ ವ್ಯಕ್ತಿಗಳು ತಪ್ಪು ಎಸಗಿರುವುದಾಗಿ ಕಂಡು ಬಂದರೆ ದಂಡ ವಿಧಿಸಲು ಮತ್ತು ಅಧಿಕಾರಿ, ನೌಕರ ಮತ್ತು ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡುವುದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 296-ಬಿರ ಉಪಬಂಧದನ್ವಯ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ದೂರನ್ನು ದಾಖಲು ಮಾಡುವ ಪ್ರಕ್ರಿಯೆ ಮತ್ತು ವಿಧಾನಗಳು) ನಿಯಮಗಳು, 2015ರನ್ವಯ ದೂರುಗಳನ್ನು ವಿಚಾರಣೆ ಮಾಡಿ ಬಾಧಿತ ನಾಗರೀಕರಿಗೆ ನಿರ್ಧಾರವನ್ನು ದೂರು ಸ್ವೀಕರಿಸಿದ 60 ದಿನದೊಳಗೆ ತಿಳಿಸತಕ್ಕದ್ದು ಹಾಗೂ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿಬೇಕಾಗಿರುತ್ತದೆ.

## ಅರ್ಜಿ ಸಲ್ಲಿಸುವ ವಿಧಾನ:

ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಬೆಂಗಳೂರು, ಕಲಬುರಗಿ, ಚಿಕ್ಕಮಗಳೂರು ಮತ್ತು ಬೆಳಗಾವಿ ಜಿಲ್ಲಾ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಹಾಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ **www.rdpr.kar.nic.in**ನಲ್ಲಿ ನೋಡಿಕೊಂಡು ದಾಖಲೆಗಳೊಂದಿಗೆ ಅರ್ಜಿಯನ್ನು **ದಿನಾಂಕ**:12.07.2021 ರ **ಸಂಜೆ** 05.30 **ಗಂಟೆಯೊಳಗೆ** ಖುದ್ದಾಗಿ / ಅಂಚೆ ಮೂಲಕ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಹಂತ, 3ನೇ ಮಹಡಿ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರಿಗೆ ತಲುಪುವಂತೆ ಸಲ್ಲಿಸುವುದು. ನಿಗದಿ ಪಡಿಸಿದ ದಿನಾಂಕದ ನಂತರ ವಿಳಂಬವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅರ್ಜಿ ನಮೂನೆಯಲ್ಲಿ ಸೂಚಿಸಿರುವಂತಹ ಎಲ್ಲಾ ದೃಢೀಕೃತ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ನಿಗದಿತ ದಿನಾಂಕದೊಳಗೆ ಸ್ವೀಕರಿಸಲ್ಪಡುವ ಅರ್ಜಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಗಳ ನೇಮಕಾತಿ ವಿಧಾನ) ನಿಯಮಗಳು, 2018 ರನ್ವಯ ರಚಿತವಾಗಿರುವ ಸತ್ಯಾಪನ ಸಮಿತಿಯ ಮೂಲಕ ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. (ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು (ಪಂ.ರಾಜ್-1), ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಸಂಪರ್ಕಿಸಬಹುದಾಗಿದೆ. (ದೂರವಾಣಿಸಂಖ್ಯೆ:080-22353925).

ನಿರ್ದೇಶಕರು (ಪಂ.ರಾಜ್-1)
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಾಸ್ ಪೋರ್ಟ್
ಅಳತೆಯ
(ಭಾವಚಿತ್ರ)

## ಸಾರ್ವಜನಿಕ ಕುಂದು ಕೊರತೆ ಪ್ರಾಧಿಕಾರ ಹುದ್ದೆಗಳ ನೇಮಕಾತಿ ಕುರಿತು:

### ಅರ್ಜಿ ನಮೂನೆ

| | | |
|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು : | |
| 2. | ಜನ್ಮ ದಿನಾಂಕ : (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಂತೆ/ ಪಿ.ಪಿ.ಓ. ಪ್ರತಿ ಲಗತ್ತಿಸುವುದು) | |
| 3. | ಅಂಚೆ ವಿಳಾಸ ಮತ್ತು ಪತ್ರ ವ್ಯವಹಾರದ ವಿಳಾಸ: | |
| 4. | ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿ: | |
| 5. | ದೈಹಿಕ ಸಾಮರ್ಥ್ಯದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ: (ಲಗತ್ತಿಸುವುದು) | |
| 6. | ಅಭ್ಯರ್ಥಿಯ ವಿದ್ಯಾರ್ಹತೆ: | |
| 7. | ಸೇವಾ ವಿವರಗಳನ್ನು ಲಗತ್ತಿಸುವುದು (ಇಲಾಖಾವಾರು, ಸೇವೆಯ ಅವಧಿ ಮತ್ತು ಧಾರಣ ಮಾಡಿದ ಹುದ್ದೆ) : | |
| 8. | ನಿವೃತ್ತಿ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗರಿಷ್ಠ ಹುದ್ದೆ/ಸ್ಥಾನ ( ಸ್ವಯಂ ದೃಢೀಕೃತ ಪ್ರತಿ ಲಗತ್ತಿಸುವುದು): | |
| 9. | ನಿವೃತ್ತಿ ಹೊಂದುವಾಗ ಧಾರಣ ಮಾಡಿದ ಹುದ್ದೆಯ ವೇತನ ಶ್ರೇಣಿ ವಿವರ: (ಸ್ವಯಂ ದೃಢೀಕೃತ ಮಹಾಲೇಖಪಾಲರ ಪಿ.ಪಿ.ಓ. ಪ್ರತಿ ಲಗತ್ತಿಸುವುದು) | |

ಮೇಲೆ ತಿಳಿಸಿರುವ ಮಾಹಿತಿಯು ವಾಸ್ತವವಾಗಿರುವುದೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ:

ಸ್ಥಳ:

ಅರ್ಜಿದಾರರ ಹೆಸರು ಮತ್ತು ಸಹಿ:

<u>ಸೂಚನೆ:</u>

* ಅರ್ಜಿದಾರರು ಒಂದಕ್ಕಿಂತ ಹೆಚ್ಚಿನ ಜಿಲ್ಲೆಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತ್ಯೇಕ ಅರ್ಜಿ ಸಲ್ಲಿಸುವುದು.
* ಅರ್ಜಿ ಸಲ್ಲಿಕೆಗೆ ಯಾವುದೇ ಶುಲ್ಕ ನಿಗದಿಪಡಿಸಿಲ್ಲ.

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22384574, E-mail:prspr.karnataka@ gmail.com

**ಸಂಖ್ಯೆ:** ಗ್ರಾಅಪ:233:ಗ್ರಾಪಂಅ:2021 ದಿನಾಂಕ:24-06-2021.

## ಪತ್ರಿಕಾ ಪ್ರಕಟಣೆ

ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಬೆಂಗಳೂರು, ಕಲಬುರಗಿ, ಚಿಕ್ಕಮಗಳೂರು ಮತ್ತು ಬೆಳಗಾವಿ ಜಿಲ್ಲಾ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಹಾಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ **www.rdpr.kar.nic.in**ನಲ್ಲಿ ನಿಗಧಿತ ಅರ್ಜಿನಮೂನೆಯನ್ನು ಅವರೋಹಣ (download)ಮಾಡಿಕೊಂಡು, ಮಾಹಿತಿಗೆ ಪೂರಕವಾದ ದಾಖಲೆಗಳೊಂದಿಗೆ ಅರ್ಜಿಯನ್ನು **ದಿನಾಂಕ:12.07.2021 ರ ಸಂಜೆ 05.30 ಗಂಟೆಯೊಳಗೆ** ಖುದ್ದಾಗಿ / ಅಂಚೆ ಮೂಲಕ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಹಂತ, 3ನೇ ಮಹಡಿ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರಿಗೆ ತಲುಪುವಂತೆ ಸಲ್ಲಿಸುವುದು. ನಿಗದಿ ಪಡಿಸಿದ ದಿನಾಂಕದ ನಂತರ ವಿಳಂಬವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅರ್ಜಿ ನಮೂನೆಯಲ್ಲಿ ಸೂಚಿಸಿರುವಂತಹ ಎಲ್ಲಾ ದೃಢೀಕೃತ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. (ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು (ಪಂ.ರಾಜ್-1), ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಸಂಪರ್ಕಿಸಬಹುದಾಗಿದೆ, (ದೂರವಾಣಿಸಂಖ್ಯೆ:080-22353925).

ನಿರ್ದೇಶಕರು (ಪಂ.ರಾಜ್-1)
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ